**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 484/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರುದ್ರಪ್ಪ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ನಾಗಪ್ಪ | ಚಾಸಾಃ 4 |
| ವಯಸ್ಸು | : | 66 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆರ್.ಜಿ. ಕ್ಯಾಂಪ್ | ದಿಃ06.03.2026 |

**(ನ್ಯಾಯಾಲಯದ ಆವರಣದಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮತ್ತು ಕಕಕ್ಷಿದಾರರನ್ನು ಹೊರತುಪಡಿಸಿ ಇತರೆ ಎಲ್ಲಾ ವಕೀಲರು ಮತ್ತು ಕಕ್ಷಿದಾರರನ್ನು ಹೊರಗೆ ಕಳುಹಿಸಿ ಸಾಕ್ಷ್ಯ ದಾಖಲಿಸಲಾಯಿತು.** )

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.5 ರಿಂದ 7 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

2. ಆರೋಪಿತರು ರಸ್ತೆಗೆ ಅಡ್ಡಲಾಗಿ ಬೇಲಿ ಹಾಕಿದ್ದರು. ಆ ವಿಚಾರದ ಕುರಿತು ಗಲಾಟೆ ಆಗಿತ್ತು. ಸದರಿ ಗಲಾಟೆ ದಿನಾಂಕ 07.08.2023 ರಂದು ಸಂಜೆ 4.30 ಕ್ಕೆ ಆಗಿತ್ತು. 1 ನೇ ಆರೋಪಿ ಚಾಸಾ.1 ರವರಿಗೆ ಕಲ್ಲಿನಿಂದ ಹೊಡೆದರು. 1 ನೇ ಆರೋಪಿ ಚಾಸಾ.7 ರವರನ್ನು ತಳ್ಳಿದರು. ನಾನು ತೋಟದಿಂದ ಬರುತ್ತಿದ್ದೆನು. ಆಗ ತಹಶೀಲ್ದಾರ್‌ರವರು ಸಹ ಸ್ಥಳಕ್ಕೆ ಬಂದರು. ನಂತರ ಎಲ್ಲರೂ ಸೇರಿ ಗಲಾಟೆ ಬಿಡಿಸಿದರು. ತಹಶೀಲ್ದಾರ್‌ರವರ ಜೊತೆ ಪೊಲೀಸರು ಸಹ ಸ್ಥಳಕ್ಕೆ ಬಂದಿದ್ದರು. ಈ ಕುರಿತು ನಾನು ಪೊಲೀಸರಿಗೆ ಗಲಾಟೆಯ ಬಗ್ಗೆ ಹೇಳಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.2 ರ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ಗಲಾಟೆಯ ಸಮಯದಲ್ಲಿ ಎಲ್ಲಾ ಆರೋಪಿತರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಎಲ್ಲಾ ಆರೋಪಿತರು ಚಾಸಾ.1 ರವರಿಗೆ ಸೂಳೆಮಕ್ಕಳ ಬೋಳಿಮಕ್ಕಳ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಎಲ್ಲಾ ಆರೋಪಿತರು ಚಾಸಾ.1 ರವರಿಗೆ ಕೈ ಮತ್ತು ಕಾಲುಗಳಿಂದ ಹೊಡೆದರು ಎಂದರೆ ಸರಿ. ಗಲಾಟೆ ಬಿಡಿಸಲು ಬಂದ ಚಾಸಾ.7 ರವರಿಗೂ ಸಹ ಅವಾಚ್ಯ ಶಬ್ಧಗಳಿಂದ ಬೈದು, ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಚಾಸಾ.1 ರವರಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದರೆ ಸರಿ. 3 ನೇ ಅರೋಪಿ ಹಲ್ಲಿನಿಂದ ಚಾಸಾ.1 ರವರ ಎರಡೂ ಕೈಬೆರಳುಗಳಿಗೆ ಕಚ್ಚಿರುತ್ತಾರೆ ಎಂದರೆ ಸರಿ. ಆಗ ನಾನು, ಚಾಸಾ.5 ಮತ್ತು 6 ರವರು ಗಲಾಟೆ ಬಿಡಿಸಿರುತ್ತೇವೆ ಎಂದರೆ ಸರಿ. ಎಲ್ಲಾ ಆರೋಪಿತರು ಚಾಸಾ.1 ಮತ್ತು 7 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸಾಕ್ಷಿ ನಾವು ದೂರ ಇದ್ದೆವು, ಆ ರೀತಿ ಬೆದಕರಿಕೆ ಹಾಕಿದರು ಬೇರೆಯವರು ತಿಳಿಸಿದರು ಎಂದು ಹೇಳುತ್ತಾರೆ. ಈ ಕುರಿತು ನಾನು ದಿ.08.08.2023 ರಂದು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದ.**

4. ನನ್ನ ಸ್ವಂತ ಊರು ಗೌಡಿಹಳ್ಳಿ. ಈಗ ಆರ್.ಜಿ. ಕ್ಯಾಂಪಿನಲ್ಲಿ ಇದ್ದೇನೆ. ನನ್ನ ಹೇಳಿಕೆಯಲ್ಲಿ ಇದು ಸಾರ್ವಜನಿಕ ರಸ್ತೆ ಎಂದು ಕೇಳುತ್ತಿರುವಾಗ ಎಂದು ಹೇಳಿದ್ದು, ಸದರಿ ರಸ್ತೆಯನ್ನು ಸರ್ಕಾರದಿಂದ ಮಾಡಿಲ್ಲ, ಬಲದಾಗಿ ಮೊದಲಿನಿಂದಲೂ ಸಹ ಇತ್ತು. ಪಶ್ಚಿಮ ದಿಕ್ಕಿನಲ್ಲೂ ಸಹ ರಸ್ತೆ ಇದೆ ಎಂದರೆ ಸಾಕ್ಷಿ ಎರಡೂ ದಿಕ್ಕಿನಲ್ಲೂ ಸಹ ಇದೆ ಎಂದು ಹೇಳುತ್ತಾರೆ. ತಹಶೀಲ್ದಾರ್‌ರವರು ಸ್ಥಳಕ್ಕೆ ಬಂದಾಗ ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಹಜರಿಗೆ ನಾನು ಸಹಿ ಮಾಡಿಲ್ಲ.

5. ಆರೋಪಿತರಿಗೆ ಸೇರಿದ ಜಮೀನಿನ ಸ.ನಂ.8 ಇರುತ್ತದೆ. ಸದರಿ ಜಮೀನು ಆರೋಪಿತರಿಗೆ ಸೇರಿದ್ದು ಎಂಬ ಬಗ್ಗೆ ನಾನು ದಾಖಲಾತಿಗಳನ್ನು ನೋಡಿಲ್ಲ. 4 ನೇ ಆರೋಪಿ ಬಿ.ಜೆ.ಪಿ. ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ ಎಂದರೆ ಸರಿ. ವೀರನಾಗಪ್ಪ ಅಂದರೆ ಚಾಸಾ.6 ರವರು ಕಾಂಗ್ರೇಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ ಎಂದರೆ ಸರಿ. ಆರೋಪಿತರು ಯಾರೂ ಸಹ ಗಲಾಟೆ ಮಾಡಲು ಹೋಗಿಲ್ಲ, ಬದಲಾಗಿ ತಹಶೀಲ್ದಾರ್‌ರವರು ಬಂದಿದ್ದ ಕಾರಣ ಸ್ಥಳಕ್ಕೆ ಹೋಗಿದ್ದರು ಎಂದರೆ ಸರಿಯಲ್ಲ. ಸ.ನಂ.8 ರ ಜಮೀನು ಆರೋಪಿತರಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ.

ತಹಶೀಲ್ದಾರ್‌ರವರು ಸ್ಥಳಕ್ಕೆ ಬಂದಾಗ ಆರೋಪಿತರು ಅಲ್ಲಿಗೆ ಹೋದಾಗ ಚಾಸಾ.6 ಮತ್ತು ಆತನ ಸಹಚರರು ಆರೋಪಿತರ ಮೇಲೆ ನೀವು ಏಕೆ ಬಂದಿದ್ದೀರ ಎಂದು ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ನಾನು ತನಿಖಾಧಿಕಾರಿಗೆ ನೀಡಿದ ಹೇಳಿಕೆಯನ್ನು ಓದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ